# Visvesvaraya Technological University

"Jnana Sangama"
Belagavi - 590 018, Karnataka State

*Dr. K.E. Prakash*
REGISTRAR

Phone : (0831) 2498100
Fax : (0831) 2405467


Ref: VTU/Gen/2015-16/ 4954

Date : 2 - SEP 2015

## NOTIFICATION

Sub: Admission of candidates under Lateral Entry to MCA III Semester/ II year during the academic year 2015-16– reg..

Ref: Govt. Order ED 104 TEC 2015 dt: 19-08-2015

With reference to the above, please find enclosed herewith the Govt. Order ED 104 TEC 2015 dt: 19-08-2015 w.r.t. Admission of candidates under Lateral Entry to MCA III Semester/ II year during the academic year 2015-16. The Principals of the colleges are hereby directed to adhere to the Government order.

Further, the contents of this Notification may be brought to the notice of all the concerned.

BY ORDER

Encl: As above

REGISTRAR

To,

1. The Principals of All Engineering Colleges Affiliated to / Autonomous under VTU, Belagavi
2. The Principal, UBDT College of Engineering, Davanagere
3. The PG Co-ordinators of all VTU Regional Centres

**Copy to:**

1. Hon'ble Vice-Chancellor through the Secretary to VC, VTU, Belagavi
2. The Registrar (Evaluation), VTU, Belagavi
3. The Special Officers of all the Regional Offices of VTU
4. The Case-workers of Academic Section(A2,A3,A4,A9) VTU, Belagavi
5. The Circular file at Dispatch section
6. The Computer Network Centres, VTU, Belagavi

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- 2015-16ನೇ ಸಾಲಿಗೆ ಬಿ.ಸಿ.ಎ., ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಪದವೀಧರರಿಗೆ ಲ್ಯಾಟರಲ್ ಎಂಟ್ರಿ ಮೂಲಕ ಎಂ.ಸಿ.ಎ 2ನೇ ವರ್ಷಕ್ಕೆ ಪ್ರವೇಶ ಪ್ರಕ್ರಿಯೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ನಡೆಸುವ ಬಗ್ಗೆ-

*****

ಓದಲಾಗಿದೆ:

1. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 101 ಟಿಇಸಿ 2005, ದಿನಾಂಕ:21-05-2005.
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 98 ಟಿಇಸಿ 2013, ದಿನಾಂಕ:22-08-2013.

ಪ್ರಸ್ತಾವನೆ:-

ಮೇಲೆ (1) ರಲ್ಲಿ ಓದಲಾದ ಸರ್ಕಾರದ ಅಧಿಸೂಚನೆಯಲ್ಲಿ ಮೊದಲನೇ ವರ್ಷದ ಎಂ.ಬಿ.ಎ/ಎಂ.ಸಿ.ಎ ಕೋರ್ಸುಗಳ ಪ್ರವೇಶಾತಿಗೆ ಸಂಬಂಧಿಸಿದಂತೆ Karnataka Selection of Candidates for Admission to MBA and MCA Courses Rules, 2005 ನ್ನು ಹೊರಡಿಸಲಾಗಿತ್ತು.

ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ 2013-14ನೇ ಸಾಲಿನ ಎಐಸಿಟಿಇ ಮಾರ್ಗಸೂಚಿ ಹಾಗೂ ಎಐಸಿಟಿಇ ಪತ್ರ ದಿನಾಂಕ:16-07-2013ರನ್ವಯ 2013-14ನೇ ಸಾಲಿನಿಂದ ಜಾರಿಗೆ ಬರುವಂತೆ ಬಿ.ಸಿ.ಎ ಹಾಗೂ ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಪದವೀಧರರಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಎಂ.ಸಿ.ಎ ಕೋರ್ಸಿಗೆ ಈ ಕೆಳಕಂಡ ಶೈಕ್ಷಣಿಕ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಗೆ ನೇರ ಪ್ರವೇಶಾವಕಾಶ ಕಲ್ಪಿಸಿ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಎಂ.ಸಿ.ಎ ಕೋರ್ಸಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರವೇಶಾತಿಗೆ ಅನುಮೋದನೆ ನೀಡಿ ಆದೇಶಿಸಿದೆ.

"Provided that students who have completed Bachelor's Degree of minimum 3 yrs. Duration in BCA, B.Sc (IT/Computer Science) with Mathematics as a course at 10+2 level or Graduate level shall be eligible for admission to second year MCA courses up to a maximum of 20% of sanctioned intake except Andaman, Nicobar, Lakshadweep, Daman and Diu where it shall be 30%, which will be the supernumerary of the approved intake."

"The eligible candidates seeking admission to 2nd year MCA will be required to qualify at the Entrance Test Conducted by the competent authority."

ಮೇಲೆ ವಿಷದಂತೆಯೇ ಬಿ.ಸಿ.ಎ ಹಾಗೂ ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಪದವೀಧರರಿಗೆ ಎಂ.ಸಿ.ಎ 2ನೇ ವರ್ಷಕ್ಕೆ ಲ್ಯಾಟರಲ್ ಎಂಟ್ರಿ ಮೂಲಕ ಶೇ.20ರಷ್ಟು ಸೀಟುಗಳಿಗೆ ನೇರ ಪ್ರವೇಶಾತಿ ನೀಡುವ ಕುರಿತು Karnataka Selection of Candidates for Admission to MBA and MCA Courses Rules, 2005ಕ್ಕೆ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ ಎಐಸಿಟಿಇ ಮಾರ್ಗಸೂಚಿಯಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ 2015-16ನೇ ಸಾಲಿಗೆ ಬಿ.ಸಿ.ಎ ಹಾಗೂ ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್)

ಪದವೀಧರರಿಗೆ ಪ್ರತ್ಯೇಕ ಪ್ರವೇಶ ಪರೀಕ್ಷೆ ನಡೆಸಿ (PGCET) ಅದರಲ್ಲಿ ಅರ್ಹತೆ ಹೊಂದಿದ ಅಭ್ಯರ್ಥಿಗಳಿಗೆ ಪ್ರವೇಶಾತಿಯನ್ನು ನೀಡಲು ತೀರ್ಮಾನಿಸಲಾಗಿದೆ. ಅದರಂತೆ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ:ಇಡಿ 104 ಟಿಇಸಿ 2015**

ಬೆಂಗಳೂರು, ದಿನಾಂಕ:[illegible]ನೇ ಆಗಸ್ಟ್ 2015

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ 2015-16ನೇ ಸಾಲಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 98 ಟಿಇಸಿ 2013, ದಿನಾಂಕ:22-08-2013ರ ಮಾಡಿರುವ ಆದೇಶದಂತೆಯೇ, ಬಿ.ಸಿ.ಎ ಹಾಗೂ ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಪದವೀಧರರಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಎಂ.ಸಿ.ಎ ಕೋರ್ಸಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರವೇಶಾತಿ ನೀಡಲು Karnataka Selection of Candidates for Admission to MBA and MCA Courses Rules, 2005ಕ್ಕೆ ಸೂಕ್ತ ತಿದ್ದುಪಡಿ ತರುವುದನ್ನು ಕಾಯ್ದಿರಿಸಿ ಈ ಕೆಳಕಂಡ ಷರತ್ತುಗಳೊಂದಿಗೆ ಅನುಮೋದನೆ ನೀಡಿದೆ.

(1) ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಎಂ.ಸಿ.ಎ ಕೋರ್ಸಿಗೆ ನೇರ ಪ್ರವೇಶ ಪಡೆಯಬಚ್ಛಿಸುವ ಬಿ.ಸಿ.ಎ ಹಾಗೂ ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಅಭ್ಯರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವತಿಯಿಂದ ಪ್ರತ್ಯೇಕ ಪ್ರವೇಶ ಪರೀಕ್ಷೆ ನಡೆಸಿ, ಅದರಲ್ಲಿ ಅರ್ಹತೆ ಹೊಂದಿದವರಿಗೆ 2ನೇ ವರ್ಷದ ಎಂ.ಸಿ.ಎ ಕೋರ್ಸಿಗೆ ಪ್ರವೇಶಾವಕಾಶ ಕಲ್ಪಿಸತಕ್ಕದ್ದು.

(2) ಎಂ.ಸಿ.ಎ ಕೋರ್ಸಿಗೆ ಮಂಜೂರಾಗಿರುವ ಕಳೆದ ಸಾಲಿನ ಇಂಟೇಕ್‌ನ ಶೇ.20 ರಷ್ಟು ಸೀಟುಗಳನ್ನು ಸರ್ಕಾರಿ ಕೋಟಾದ ಸೀಟುಗಳೆಂದು ಪರಿಗಣಿಸಿ ಬಿ.ಸಿ.ಎ ಹಾಗೂ ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಪದವೀಧರರಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಎಂ.ಸಿ.ಎ ಕೋರ್ಸಿಗೆ ಹಂಚಿಕೆ ಮಾಡತಕ್ಕದ್ದು.

(3) ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಎಂ.ಸಿ.ಎ ಕೋರ್ಸಿಗೆ ನೇರ ಪ್ರವೇಶ ಪಡೆಯಬಚ್ಛಿಸುವ ಬಿ.ಸಿ.ಎ ಹಾಗೂ ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಅಭ್ಯರ್ಥಿಗಳು 10+2 ಅಥವಾ ಪದವಿಯಲ್ಲಿ ಗಣಿತ ವಿಷಯದೊಂದಿಗೆ ತೇರ್ಗಡೆ ಹೊಂದಿರತಕ್ಕದ್ದು.

(4) ಎಐಸಿಟಿಇ ನಿಯಮಾವಳಿಯಂತೆ, ಅಭ್ಯರ್ಥಿಗಳು ಬಿ.ಸಿ.ಎ/ಬಿ.ಎಸ್ಸಿ (ಐಟಿ/ಕಂಪ್ಯೂಟರ್ ಸೈನ್ಸ್) ಪದವಿಯಲ್ಲಿ ಕನಿಷ್ಠ ಶೇ.50 ರಷ್ಟು ಅಂಕ (ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ಶೇ.45 ಅಂಕ) ಪಡೆದಿರತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ತಾಂತ್ರಿಕ ಶಿಕ್ಷಣ)

ಗೆ:-
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು-ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 100 ಪ್ರತಿಗಳನ್ನು ತಾಂತ್ರಿಕ ಶಿಕ್ಷಣ ಶಾಖೆಗೆ ಒದಗಿಸುವುದು.

ಪ್ರತಿ:-

1) ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ
2) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಮಲ್ಲೇಶ್ವರಂ, ಬೆಂಗಳೂರು
3) ಪ್ರಾದೇಶಿಕ ಅಧಿಕಾರಿ, ಎಐಸಿಟಿಇ, ದಕ್ಷಿಣ ಪ್ರಾದೇಶಿಕ ವಲಯ ಕಛೇರಿ, ಪಿ.ಕೆ.ಬ್ಲಾಕ್, ಅರಮನೆ ರಸ್ತೆ, ಬೆಂಗಳೂರು
4) ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳಿಗೆ (ಎಲ್ಲಾ ಪದವಿ ಕಾಲೇಜುಗಳಿಗೆ ಆದೇಶವನ್ನು ರವಾನಿಸಲು ಕೋರಿದೆ)
5) ತಾಂತ್ರಿಕ ಶಿಕ್ಷಣ ನಿರ್ದೇಶಕರು, ಬೆಂಗಳೂರು
6) ಸರ್ಕಾರದ ಉಪ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ)
7) ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
8) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)ರವರ ಆಪ್ತ ಕಾರ್ಯದರ್ಶಿ
9) ಶಾಖಾ ರಕ್ಷಾ ಕಡತ / ಹೆಚ್ಚಿನ ಪ್ರತಿಗಳು